<u>ದಿನಾಂಕಃ**24-10-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀಮತಿ ಎಸ್ ಎಂ ವಕೀಲರಿಂದಃ</u>

ನನಗೆ ಈಗ 40 ವರ್ಷ ವಯಸ್ಸು ಇರುತ್ತದೆ. ನನಗೆ 40 ವರ್ಷ ಇರುವ ಸಂಬಂಧ ಆಧಾರ್ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ನಾನು 7 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಹಾರ ಮತ್ತು ವೆಹಿಕಲ್ ಡೀಲರ್ ಮಾಡುವ ಸಂಬಂಧ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಸಾಕ್ಷಿ ಮುಂದುವರೆದು ನನ್ನ ಹೆಸರಿನಲ್ಲಿ ಯಾವುದೇ ದಾಖಲೆ ಇಲ್ಲ ಎಂದು ಉತ್ತರಿಸುತ್ತಾರೆ. ನಾನು ಯಾವುದೇ ವ್ಯವಹಾರ ಮತ್ತು ವೆಹಿಕಲ್ ಡೀಲರ್ ಬ್ಯುಸಿನೆಸ್ ಮಾಡುತ್ತಾ ಇಲ್ಲ ಎಂದರೆ ಸರಿಯಲ್ಲ. ನನಗೆ ಮಾಸಿಕ ರೂ.30,000/- ಆದಾಯ ಇರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ ಸಾಕ್ಷಿ ಮುಂದುರೆದು ಕಮಿಷನ್ ಮುಖಾಂತರ ಅಷ್ಟು ಹಣ ಬರುತ್ತಿತ್ತು ಎಂದು ಉತ್ತರಿಸುತ್ತಾರೆ. ನನಗೆ ಮಾಸಿಕ ರೂ. 30,000/- ಆದಾಯ ಇರದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಪಡಿತರ ಚೀಟಿ ಇರುವುದಿಲ್ಲ.

2. ನಾನು ಅಪಘಾತದ ನಂತರ ಮೂರು ನಾಲ್ಕು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಸಂಬಂಧ ಯಾವುದೇ ದಾಖಲೆಯನ್ನು ಹಾಜರುಪಡಿರುಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿದ್ದು ಯಾವುದೇ ತೀವ್ರ ಸ್ವರೂಪದ ಗಾಯಗಳು ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೆ ಎಂ ಸಿ ಆಸ್ಪತ್ರೆ ಹಾಗೂ ಹರ್ಷ ಲಕ್ಷ್ಮಿ ಆಸ್ಪತ್ರೆ ಹಾಗೂ ಅಥರ್ವ ಆರ್ಥೋ ಕೇರ್, ಸೂರತ್ಕಲ್ ನಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದ ಸಂಬಂಧ ಹಾಗೂ ಶಸ್ತ್ರ ಚಿಕಿತ್ಸೆ ಸಂಬಂಧ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಆದ ಗಾಯಗಳಿಂದ ಸಂಪೂರ್ಣ ಗುಣಮುಖನಾಗಿದ್ದು ಮುಂದುವರೆದ ಚಿಕಿತ್ಸೆಗೆ ಮೂರು ಲಕ್ಷ ಹಣದ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಯ ಸಂಬಂಧ 5 ಲಕ್ಷ ಹಣ ಖರ್ಚು ಅಗಿರುತ್ತದೆ ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಳವಡಿಸಿದ ಇಂಪ್ಲಾಂಟ್ಸ್ ಅನ್ನು ತೆರವುಗೊಳಿಸಲು ನಾನು 15 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಇರಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಓಡಾಡಲು ಮತ್ತು ದೈನಂದಿನ ಕೆಲಸ ಕಾರ್ಯಗಳನ್ನು ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ 2 ವರ್ಷಗಳ ಕಾಲ ವಿಶ್ರಾಂತಿ

ಪಡೆಯುವಂತೆ ವೈಧ್ಯರು ಹೇಳಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ಆ ದಿನ ನಾನು ನಮ್ಮ ಮನೆಯಿಂದ ಸುಭಾಷ್ ಮಾರುತಿ ಶೋ ರೂಂ ನಮ್ಮ ಕಛೇರಿಯ ಬಳಿ ಹೋಗುತ್ತಿದ್ದೆ. ನಾನು ಆ ದಿನ ಸ್ಕೂಟಿಯಲ್ಲಿ ಹೋಗುತ್ತಿದ್ದೆ. ಸದರಿ ಸ್ಕೂಟಿ ನನಗೆ ಸಂಬಂಧಿಸಿದ ವಾಹನ ಇರುತ್ತದೆ. ಸದರಿ ಸ್ಕೂಟರ್ ನನಗೆ ಸಂಬಂಧಿಸಿದ ಬಗ್ಗೆ ದಾಖಲಾತಿಯನ್ನು ಮತ್ತು ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಲಾಯಕ್ಕೆ ಹಾಜರಪಡಿಸಿರುತ್ತೇನೆ. ನನ್ನ ಬೈಕಿಗೆ ವಿಮೇ ಚಾಲ್ತಿಯಲ್ಲಿ ಇತ್ತು. ನಮ್ಮ ಬೈಕಿಗೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ಬೈಕಿನ ರಿಪೇರಿಗಾಗಿ ರೂ. 25,000/- ಹಣ ಖರ್ಚಾದ ಬಗ್ಗೆ ದಾಖಲೆಯನ್ನು ಹಾಜರಪಡಿಸಿರುವುದಿಲ್ಲ ಸಾಕ್ಷಿ ಮುಂದುವರೆದು ಬೈಕ್ ಗ್ಯಾರೇಜಿನಲ್ಲಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಅಪಘಾತ ಆದ 4 ದಿನಗಳ ನಂತರ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಾನು ಆಸ್ಪತ್ರೆಯಲ್ಲಿ ಇದ್ದು ನನ್ನ ಹೆಂಡತಿ ದೂರುನ್ನು ಕೊಟ್ಟಿರುತ್ತಾರೆ. ನಾನು ಸ್ಕೂಟಿಯನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಕಾರಿಗೆ ಡಿಕ್ಕಿ ಪಡಿಸಿರತ್ತೇನೆ ಎಂದರೆ ಸರಿಯಲ್ಲ. ಅಪಘಾತವೂ 1 ನೇ ಎದರುರುದಾರರ ತಪ್ಪಿ ನಿಂದ ಆಗಿರುವುದಿಲ್ಲ ಆ ಕಾರಣದಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಗಾಯ ಪ್ರಮಾಣ ಪತ್ರ ಹೊರತುಪಡಿಸಿ ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ಯೂವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರು ಪರಿಹಾರ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 1 ನೇ ಎದುರುದಾರರ ಪರ ವಕೀಲರು 2 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ

ಎಂ ವಿ ಸಿ ನಂಃ 145/2025
ಪಿ ಡಬ್ಲ್ಯುಃ 1

ಎಂ ವಿ ಸಿ ನಂಃ 145/2025
ಪಿ ಡಬ್ಲ್ಯುಃ 1